ಮರಗಳ ಬೇರುಗಳಿದ್ದರೆ ಮಣ್ಣಿಗೆ ಒಂದಿಷ್ಟು ಬಲ, ಬೆಂಬಲ ಒದಗಿ ಬರುತ್ತಿತ್ತು. ಗಂಗಾವಳಿ ನದಿಯನ್ನೇ ಈಗ ಎಷ್ಟೋ ಟನ್ನುಗಳಷ್ಟು ಗುಡ್ಡದ ಮಣ್ಣು ಆಕ್ರಮಿಸಿ ಕುಳಿತಿತ್ತು ನಡುಗಡ್ಡೆಯಂತೆ! ಸತ್ತವರ ಲೆಕ್ಕ ಸಿಕ್ಕಿಲ್ಲ. ಬದುಕುಳಿದವರ ದಿಕ್ಕು ದೆಸೆ ಏನೋ ತಿಳಿಯದು. ಎಲ್ಲ ವಿವರಗಳನ್ನು ತಿಳಿಯುತ್ತ ಕವಿ ದಿಗ್ಭ್ರಾಂತರಾಗಿ ಕುಳಿತರು. ಈ ದುರಂತ ಅವರ ಕವಿಕಲ್ಪನೆಗೆ ನಿಲುಕದಾಗಿತ್ತು. ನಾನು ಹೇಳಿದ ಕಾವ್ಯಮೀಮಾಂಸೆಯಿಂದಲೂ ಅವರಿಗೆ ಈಗ ಯಾವುದೇ ಪ್ರಯೋಜನವಿರಲಿಲ್ಲ. ಅದೇ ಹೊತ್ತಿಗೆ ನಾನು ಕವಿಗಳ ಮನೆ ಅಂಗಳ ಪ್ರವೇಶಿಸಿದೆ.

ಮಂಗಳೂರಿಗೆ ಕಾರ್ಯ ನಿಮಿತ್ತ ಹೋಗಿದ್ದ ನಾನು ಒಂದು ದಿನ ಊರಲ್ಲೂ ಇದ್ದು ಬರಬೇಕೆಂಬ ಉಮೇದಿನಿಂದ ಕಾರವಾರ ಬಸ್ಸು ಹಿಡಿದು ಹೊರಟಿದ್ದೆನು. ಕರಾವಳಿಯ ಹಲವು ಕಡೆ ಗುಡ್ಡಗಳ ಕುಸಿತದಿಂದಾಗಿ ಪ್ರಯಾಣ ಬಹು ಕಷ್ಟದ್ದಾಯಿತು. ತುಂಬಾ ಕಷ್ಟಪಟ್ಟು ಸಿಕ್ಕ ವಾಹನಗಳನ್ನು ಹತ್ತಿ, ಇಳಿದು, ನಡೆದು, ಯಾರದೋ ಬೈಕ್ ಹತ್ತಿ ಮಿರ್ಜಾನವರೆಗೂ ಬಂದೆ. ಅಲ್ಲಿಂದ ಕಾಡಮೂಲೆಗೆ ಆರೇಳು ಕಿಲೋಮೀಟರುಗಳ ಕಾಲುದಾರಿ. ಅಷ್ಟೇನೂ ಕಷ್ಟವಾಗಲಾರದೆಂದು ನನ್ನನ್ನು ನಾನೇ ನಂಬಿಸಿಕೊಂಡು ಆ ದೂರವನ್ನು ನಡೆಯುತ್ತಾ ಕ್ರಮಿಸಿದೆ. ಕೈಯಲ್ಲಿ ಕೊಡೆ ಇತ್ತು, ಚೀಲದಲ್ಲಿ ಬಿಸ್ಕೀಟು ಇತ್ತು. ಮಿರ್ಜಾನಿನ ಗೂಡಂಗಡಿಯಲ್ಲಿ ಚಾ ಕುಡಿದಿದ್ದೆ. ಇನ್ನು ಚಂಪಾರಣ್ಯದ ಪಕ್ಷಿಗೇನು ಭಯ? – ಎಂದುಕೊಳ್ಳುತ್ತಾ ಹೊರಟೆ. ದಾರಿ ನಡುವೆ ಕೇಶವ ಪಡ್ತಿ ಎಂಬಾತ ಅವನ ಊರಿನವರೆಗೂ ನನಗೆ ಜೊತೆಯಾದ. ನಾನು ಕಾಡಮೂಲೆಗೆ ಹೋಗುತ್ತಿರುವುದನ್ನು ತಿಳಿದು ಅಲ್ಲಿಂದ ಮುಂದೆ ಗುಡ್ಡದ ಕುಸಿತದಿಂದಾಗಿ ಅವಾಂತರಗಳೇ ಸೃಷ್ಟಿಯಾಗಿವೆ ಎಂದು ಎಚ್ಚರಿಸಿದ. 'ಹಾಗಿದ್ದರೆ ನಾನು ಅಲ್ಲಿಗೆ ಹೋಗಲೇಬೇಕು. ರಾನಭ ಎಂಬ ನನಗೆ ತುಂಬಾ ಬೇಕಾದ ಗೆಳೆಯರು ಅಲ್ಲಿದ್ದಾರೆ' ಎಂದೆ. ಕಾಡಮೂಲೆ ಅಷ್ಟು ಸುಲಭವಾಗಿ ಪ್ರಕೃತಿ ವಿಕೋಪದಿಂದ ಘಾಸಿಗೊಳ್ಳದು ಎಂಬ ಭರವಸೆ ನನಗಿದ್ದೇ ಇತ್ತು. ಆದಷ್ಟೂ ವೇಗವಾಗಿ ನಡೆದೆ. ಕತ್ತಲಾಗುವುದರೊಳಗೆ ನನಗೆ ಅವರ ಮನೆ ಸೇರಬೇಕಾಗಿತ್ತು. ಕೈಲಿ ಮೊಬೈಲಿದ್ದರೂ ನೆಟ್‌ವರ್ಕ್ ಇರಲಿಲ್ಲ.

ರಾನಭ ಅವರಿಗೆ ನಾನು ಬಂದುದು ಒಂದು ದೈವೀ ಘಟನೆಯಾಗಿ ಕಾಣಿಸಿತು! ಹಾಗೆ ನಾನು ಎಂದೂ ಅವರ ಮನೆಗೆ ಹೇಳದೆ ಕೇಳದೆ ಹೋದವನಲ್ಲ. 'ಅದು ದೈವೀ ಘಟನೆ ಆಗಿದ್ದುಕೊಳ್ಳಲಿ. ಮೊದಲು ನಾನು ಸ್ನಾನ ಮಾಡಬೇಕು ಮತ್ತು ಹೊಟ್ಟೆ ಬಿರಿಯುವಂತೆ ಊಟ ಮಾಡಬೇಕು. ಈ ಲೌಕಿಕ ಸಂಗತಿಗಳು ಮೊದಲು ಈಡೇರಲಿ' ಎಂದೆ. ಅದಕ್ಕೆ ಅಬ್ಬೆಯ ಅನುಮೋದನೆ ದೊರಕಿತು.

ಆ ರಾತ್ರಿ ನಾವು ಮಲಗಲಿಲ್ಲ. ಮಳೆ ಸುರಿಯುತ್ತಲೇ ಇತ್ತು. ಕಾಡನ್ನು ಆವರಿಸಿದ ದಟ್ಟ ಕತ್ತಲೆ ಮತ್ತು ಅಗಾಧ ಮೌನದ ನಡುವೆ ಮಳೆಯದೊಂದು ನಿಲ್ಲದ ಶ್ರುತಿಯಾಗಿತ್ತು. ಮಾತಿನ ನಡುನಡುವೆ ಸುದೀರ್ಘ ಮೌನದ ಅಧ್ಯಾಯಗಳಿದ್ದವು. ಆಗಲೂ ಹಿನ್ನೆಲೆಯಲ್ಲಿ ಮಳೆ ನಮ್ಮನ್ನು ಜಗದ ಆದಿಮ ಸ್ಥಿತಿಗೆ ಕರೆದೊಯ್ಯುತ್ತಿದೆ ಎಂದು ಭಾಸವಾಗುತ್ತಿತ್ತು. ಒಂದು ಸಲವಂತೂ ನಾನು ಕಾಡಿನ ಒಂದು ಗುಹೆಯಲ್ಲಿ ಮೈಯೆಲ್ಲಾ ಮುದುರಿ ಕೂತ ಪ್ರಾಣಿ ಎಂಬಂತೆ ಭ್ರಮೆಯುಂಟಾಯಿತು. ಹಠಾತ್ತನೆ ರಾನಭ 'ಪಂಪನ ಕಾವ್ಯದಲ್ಲಿ ಇಂಥ ಸಂದರ್ಭಗಳಿವೆಯೇ?' ಎಂದು ವಿಚಾರಿಸಿದರು. 'ಇರಬಹುದು, ಇಲ್ಲದಿರಬಹುದು' ಅಂದೆ. ಕವಿ ಸಿಟ್ಟಿಗೆದ್ದು 'ಇಲ್ಲ ಅಂತ ಸರಿಯಾಗಿ ಹೇಳಿ. ಅದೇನು ಬಹುದು ಗಿಹುದು ಅಂತೀರಿ?' ಎಂದು ಸಿಡುಕಿದರು. ಅವರೇ ಸಮಾಧಾನ ತಂದುಕೊಂಡು ಉತ್ತರಿಸಿದರು: 'ಇಂಥ ದೃಶ್ಯಗಳಿಲ್ಲ. ಏಕೆಂದರೆ ಆಗ ಜನರು ಇಷ್ಟು ಕೆಟ್ಟಿರಲಿಲ್ಲ. ಹೆದ್ದಾರಿ ನಿರ್ಮಿಸಲು ಬೇಕಾಬಿಟ್ಟಿಯಾಗಿ ಕಾಡು ಕಡಿಯಲಿಲ್ಲ ಅವರು. ಅಂದಮೇಲೆ ಇಂಥ ಸನ್ನಿವೇಶ ಹೇಗೆ ಬರುತ್ತದೆ?' ಎಂದರು. 'ಹೌದು, ಅವನು ಇಂಥ ದೃಶ್ಯ ನೋಡಿಲ್ಲ ಬಿಡಿ' ಎಂದೆ. 'ಬಂದಿದ್ದರೂ ಆಗ ಅನಿಲದ ಟ್ಯಾಂಕರ್ ನದಿಯೊಳಗೆ ನುಗ್ಗಿದ್ದನ್ನು ಬರೆಯಲು ಅವನಿಗೆ ಸಾಧ್ಯವಿರಲಿಲ್ಲ' ಎಂದರು. ಅವರ ಮನಸು ಎಲ್ಲಿಗೆ ಯಾಕೆ ಹೋಗುತ್ತಿದೆ ಎಂದು ಪತ್ತೆಯಾಗುತ್ತಿರಲಿಲ್ಲ. ಅದು ಮಳೆಯಷ್ಟೇ ವಿಚಿತ್ರವಾಗಿ, ಸ್ವೇಚ್ಛೆಯಾಗಿ ಹರಿಯತೊಡಗಿತ್ತು. 'ಈ ಮಳೆ ಹೀಗೇ ಎಂದು ಕಾಣುತ್ತದೆ. ಇದು ಎಂದಿಗೂ ಮುಗಿಯಲಾರದು, ಎಂದೆಂದಿಗೂ ಮುಗಿಯಲಾರದು' ಎಂದು ವಿಲಕ್ಷಣ ಧ್ವನಿಯಿಂದ ಘೋಷಿಸುತ್ತಾ ಕವಿ ಎದ್ದು ನಿಂತರು. 'ಯಾಕೆ ಎದ್ದು ನಿಂತಿದ್ದು?' ಎಂದೆ.